# ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಎಸ್.ಸಿ. ಸಂಖ್ಯೆಃ 2-2013 ಸಿಡಬ್ಲ್ಯೂಃ15

ಪಿಡಬ್ಲ್ಯೂಃ6

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಘವ ಪಡೀಲ್ |
| ತಂದೆ ಹೆಸರು | ಃ | ದಿ. ಸೀತಾರಾಮ ಎಸ್. ಪಡೀಲ್ |
| ವಯಸ್ಸು | ಃ | 52 |
| ವೃತ್ತಿ | ಃ | ಪೋಲೀಸು ನಿರೀಕ್ಷಕ ಸಿಸಿಐಬಿ ಘಟಕ ಮಂಗಳೂರು ನಗರ |
| ವಾಸ | ಃ | ಮಂಗಳೂರು |

ದಿನಾಂಕಃ12-02-2016 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದ

ನಾನು ಜೂನ್-2003 ರಿಂದ ಎಪ್ರಿಲ್ – 2005ರ ವರೆಗೆ ಶಂಕರನಾರಾಯಣ ಪೋಲೀಸು ಠಾಣೆಯಲ್ಲಿ ಪೋಲೀಸು ಉಪ ನಿರೀಕ್ಷಕನಾಗಿ ಸೇವೆ ಸಲ್ಲಿಸಿರುತ್ತೇನೆ.

ದಿನಾಂಕಃ26-12-2004ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 3.30 ಗಂಗೆ ಸಮಯಕ್ಕೆ ಸಾರ್ವಜನಿಕರು ದೂರವಾಣಿ ಕರೆ ಮಾಡಿ ಬಾಳೆಬರೆ ಘಾಟಿಯಲ್ಲಿ ಯಾವುದೋ ಒಬ್ಬ ಅಪರಿಚಿತ ವ್ಯಕ್ತಿಯನ್ನು ಹೊಡೆದು ಗಾಯಗೊಡಿಸಿ ಆತನ ವಾಹನವನ್ನು ದರೋಡೆ ಮಾಡಿಕೊಂಡು ಹೋಗಿರುವುದಾಗಿ ಮಾಹಿತಿ ಬಂದಿದ್ದು ಮತ್ತು ಸದ್ರಿ ವ್ಯಕ್ತಿ ಸಿದ್ದಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ಮಾಹಿತಿ ಬಂದಿದ್ದು ಸದ್ರಿ ಮಾಹಿತಿಯನ್ನು ಜಿಲ್ಲಾ ನಿಸ್ತಂತು ಕೊಠಡಿಗೆ ನಿಸ್ತಂತು ಸಂದೇಶದ ಮುಖಾಂತರ ತಿಳಿಸಿದೆನು. ನಂತರ ಕೂಡಲೇ ಸಿದ್ದಾಪುರ ಪ್ರಾಥಮೀಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಆಸ್ಪತ್ರೆಗೆ ದಾಖಲಾದ ಶೌಕಾತ್ ಆಲಿ ಪ್ರಾಸಾ.4 ಇವರನ್ನು ವಿಚಾರಿಸಿ ಅವರ ಹೇಳಿಕೆ ಪಿರ್ಯಾದಿಯನ್ನು ಪಡೆದುಕೊಂಡೆನು. ಸದ್ರಿ ಪ್ರಾ.ಸಾ.4 ಇವರು ನೀಡಿದ ಹೇಳಿಕೆ ಪಿರ್ಯಾದಿಯು ನ್ಯಾಯಾಲಯದ ನಿಶಾನೆ ಪಿ-9ರಲ್ಲಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-9ಬಿ ಎಂದು ಗುರುತಿಸಲಾಯಿತು. ಪಿರ್ಯಾದಿ ಆಧಾರದಲ್ಲಿ ಠಾಣೆಗೆ ಹಿಂತಿರುಗಿ

ಬಂದು ಭಾ.ದಂ.ಸಂ.ಕಲಂ 2 394ರಡಿಯಲ್ಲಿ ಅಪರಾಧದ ಬಗ್ಗೆ ನಮ್ಮ ಠಾಣಾ ಅಪರಾಧ ಕ್ರಮ ಸಂಖ್ಯೆ 159/2004ರಲ್ಲಿ ನೊಂದಾಯಿಸಿಕೊಂಡು ಪ್ರ. ವರದಿಯನ್ನು ನ್ಯಾಯಾಲಯಕ್ಕೆ ರವಾನಿಸಿದೆ. ಅದನ್ನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು ಪ್ರ.ವರದಿಯನ್ನು ನ್ಯಾಯಾಲಯ ನಿಶಾನೆ ಪಿ-13 ಎಂದೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-13ಎ ಎಂದು ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗೆ ಅಂದಿನ ಸಿಪಿಐ ರವರಾದ ಚಾ.ಸಾ.16 ಇವರಿಗೆ ವಹಿಸಿಕೊಟ್ಟೆನು. ನಂತರ ಬ್ರಹ್ಮಾವರ ಠಾಣೆ ವೃತ್ತ ನಿರೀಕ್ಷಕರಾದ ವಿದ್ಯಾಶಂಕರ ಇವರು ಪ್ರಕರಣಕ್ಕೆ ಸಂಬಂಧಿಸಿದ 5 ಜನ ಆರೋಪಿತರನ್ನು ದಸ್ತಗಿರಿ ಮಾಡಿ ವಶಕ್ಕೆ ತೆಗೆದುಕೊಂಡಿದ್ದರು. ಸದ್ರಿ ಆರೋಪಿತರನ್ನು ಕುಂದಾಪುರ ವೃತ್ತ ನಿರೀಕ್ಷಕರಾದ ಚಾ.ಸಾ.16 ಇವರಿಗೆ ಹಸ್ತಾಂತರಿಸುವಾಗ ನಾನು ಉಪಸ್ಥಿತನಿದ್ದೆ. ಮತ್ತು ಆರೋಪಿತರಿಂದ ಸ್ವತ್ತುಗಳನ್ನು ಅಮಾನತುಪಡಿಸಿಕೊಳ್ಳುವಾಗ ನಾನು ಹಾಜರಿದ್ದೆ. ದಸ್ತಗಿರಿ ಆದ 5 ಜನ ವ್ಯಕ್ತಿಗಳಲ್ಲಿ ತಲೆಮರೆಸಿಕೊಂಡ 4ನೇ ಆರೋಪಿ ಫಾರುಕ್‌ನನ್ನು ನೋಡಿದರೆ ಗುರುತಿಸುತ್ತೇನೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.
ಕುಂದಾಪುರ